ಓದಿನಲ್ಲಿ ನಾನು ಅಷ್ಟೇನೂ ಚುರುಕಿರಲಿಲ್ಲ. ಆಟಗಳಲ್ಲೂ ಆಸ್ಥೆ ಕಡಿಮೆ. ಕ್ರಿಕೆಟ್ ಒಂದಕ್ಕೆ ಸೇರಿಕೊಂಡಿದ್ದೆ. ಕುಳ್ಳಗೆ ಇದ್ದುದರಿಂದ ನನ್ನ ಬೌಲಿಂಗು ಮೊನಚಿರಲಿಲ್ಲ. ಹಿಗ್ಗಾಮುಗ್ಗಾ ಥಳಿಸಿಕೊಳ್ಳುತ್ತಿತ್ತು. ಮೆಲ್ಲನೆ ಟೀಂನವರು ನನ್ನನ್ನು ಕಳಚಿಬಿಟ್ಟರು. ಮಾವನ ಮನೆಯಿಂದ ಉತ್ತರಕ್ಕೆ ಒಂದು ಮಣ್ಣಿನ ದಿಬ್ಬ ಇತ್ತು. ಅದರ ತುದಿಗೆ ಒಂದು ಮಾಂಗಾಯಿ ಮರ ಇತ್ತು. ಅಲ್ಲಿಗೆಹೋಗಿ ಆಗಾಗ ಕುಳಿತುಕೊಳ್ಳುವ ಹವ್ಯಾಸ ಬೆಳೆಸಿಕೊಂಡೆ. ಬೇರೆ ಆಸಕ್ತಿಗಳು ನನ್ನಲ್ಲಿ ಏನೂ ಇರಲಿಲ್ಲ.

ಮಾವ ಎಂದೂ ನನ್ನ ಕೈಯಿಂದ ಸಿಗರೇಟು ತರಿಸುತ್ತಿರಲಿಲ್ಲ. ಹಾಗೆಯೇ ಓಡಿಹೋದ ನನ್ನ ಅಮ್ಮನ ಬಗ್ಗೆ ಮಾತಾಡುತ್ತಿರಲಿಲ್ಲ. ಆದರೆ ಅವರು ಸೇದುತ್ತಿದ್ದುದು ನನಗೆ ಗೊತ್ತಿತ್ತು. ಒಂದು ಹೌದು ಎಂದ ಮೇಲೆ ಇನ್ನೊಂದೂ ಹೌದೇ ಆಗಿರಬೇಕು. ಕೊನೆ ಪಕ್ಷ ಮಾಮಿ ಬಳಿಯಾದರೂ!

## ಎರಡು

ನನಗೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಎರಡನೇ ದರ್ಜೆ ದೊರೆಯಿತು. ಮಾವ, 'ಮುಂದೇನು ಮಾಡುತ್ತಿ?' ಎಂದು ನನ್ನನ್ನು ಕೇಳಿದರು. ನಾನು ತಾನೆ ಏನು ಹೇಳಲು ಸಾಧ್ಯ ಅಥವಾ ಸಾಧ್ಯವಿತ್ತು. 'ಆರ್ಟ್ಸ್ ತೆಗೆದುಕೊಂಡು ಓದುತ್ತೀನಿ' ಎಂದದ್ದಕ್ಕೆ ಅವರು ಏನೂ ಹೇಳಲಿಲ್ಲ. ಮುಂದೆ ಬಿ.ಎ. ಕೂಡ ನನ್ನ ಆಯ್ಕೆಯೇ ಆಗಿತ್ತು. ಆದರೆ ಅಲ್ಲೂ ನನ್ನ ನಸೀಬು ಖೊಟ್ಟಿ ಇತ್ತು. ಒಳ್ಳೆಯ ಅಂಕಗಳು ಸಿಗಲಿಲ್ಲ.

'ಎನ್ನಾರ್' ಕಾಲೇಜಿನಲ್ಲಿ ಆಡಳಿತ ಮಂಡಳಿ ಸದಸ್ಯರಾಗಿದ್ದ ವೆಂಕಟರಾಂ ನಮ್ಮ ಸೋದರಮಾವನಿಗೆ ಹೈಸ್ಕೂಲಿನಲ್ಲಿ ಸಹಪಾಠಿಯಾಗಿದ್ದವರು. ಆಗವರು ಫುಟ್‌ಬಾಲ್ ಆಟಗಾರರಾಗಿದ್ದರಂತೆ. ಇವತ್ತಿಗೂ ಒಳ್ಳೆಯ ಅಂಗಸೌಷ್ಟವ ಅವರದು. ಸಮಾಜ ಸೇವೆಯಲ್ಲಿ ಅವರದು ದೊಡ್ಡ ಹೆಸರು. ಮದುವೆಯಾಗಿರಲಿಲ್ಲ. ಅವರ ವಿಧವೆ ಅತ್ತಿಗೆಗೆ ಮದುವೆಗೆ ಬಂದ ಮೂವರು ಹೆಣ್ಣುಮಕ್ಕಳಿದ್ದರು. ಅಣ್ಣ ಅನ್ನಿಸಿಕೊಂಡವನು ಮಾಡಿದ ಎರಡು ಘನಂದಾರಿ ಕಾರ್ಯಗಳೆಂದರೆ: ಮೂವರು ಹೆಣ್ಣುಮಕ್ಕಳನ್ನು ಹುಟ್ಟಿಸಿದ್ದು ಒಂದಾದರೆ; ಅವರಿಗಾಗಿ ಏನೂ ಮಾಡದೆ ಕುಡಿದು ಕುಡಿದು ಸತ್ತುಹೋದದ್ದು ಎರಡನೆಯದು. ಅತ್ತಿಗೆ ಇವರ ನೆರಳು ಬೇಡಿ ಎಡತಾಕುತ್ತಿದ್ದರು. ಇವರೂ ಅಷ್ಟೋ ಇಷ್ಟೋ ಮಾಡದೇನೂ ಇಲ್ಲ. ಆದರೂ ಹೆಣ್ಣುಮಕ್ಕಳಿಗೆ ಒಂದು ನೆಲೆ ಕಲ್ಪಿಸುವುದೆಂದರೆ ಅವರಿಗೂ ತ್ರಾಸೆನಿಸಿರಬೇಕು.

ಮಾವ ವೆಂಕಟರಾಂ ಅವರ ಬಳಿ ಒಮ್ಮೆ ಕೇಳಿದರಂತೆ: 'ನಿಮ್ಮ ಕಾಲೇಜಿನಲ್ಲಿ ನಮ್ಮ ಹುಡುಗನಿಗೆ ಏನಾದರೂ ಚಾಕರಿ ಗೀಕರಿ ಸಿಗುತ್ತಾ ನೋಡ್ತೋ? ಬಿ.ಎ. ತನಕ ಓದಿದಾನೆ. ಸುಮ್ಮನೆ ಅಪಾಪೋಲಿಯಾಗಿ ಹಾಳಾದಾನು ಎಂಬ ಚಿಂತೆ. ಎಂತದ್ದೋ ಒಂದು ನೌಕರಿಯಾಗಿಬಿಟ್ಟರೆ ಅವನ ಅನ್ನಕ್ಕೆ ದಾರಿಯಾಗುತ್ತೆ.'

ವೆಂಕಟರಾಂ, 'ಸಾಧ್ಯವಾದಷ್ಟು ಪ್ರಯತ್ನ ಮಾಡೋಣ' ಎಂದರಂತೆ.

ಅವರು ಬರೆ ಮಾತಿಗಂದದ್ದಲ್ಲ. ಖರೆ ಯತ್ನಿಸಿ 'ಎನ್ನಾರ್' ಕಾಲೇಜಿನಲ್ಲಿ ಗ್ರಂಥಾಲಯ ಸಹಾಯಕನನ್ನಾಗಿ ಮಾಡಿದರು. ನಾನು ಅವರಿಗೆ ತುಂಬಾ ಋಣಿಯೆಂದು ಅವರ ಮನೆಗೆ ಹೋಗಿ ಹೇಳಿ ಬಂದೆ. ಮಾವನೂ ಇದ್ದ. 'ದೇವರು ಒಳ್ಳೆಯದು ಮಾಡಲಿ' ಎಂದು ಮಾತ್ರ ಅವರು ಹರಸಿದರು.

ಕಾಲೇಜಿಗೆ ಹತ್ತಿರ ಇರುವ ಭಾಗವತ ಸುಬ್ಬರಾಯರ ರಸ್ತೆಯಲ್ಲಿರುವ ಒಂದು ಮಹಡಿ ಮನೆ ಮೇಲೆ ಬಾಡಿಗೆಗೆ ಕೋಣೆಯೊಂದು ಹಿಡಿದೆ. ಮಾವನೇ ಮುಂಗಡ ಹಣ ತೆತ್ತ. ನನಗೂ ಖಾಸಗಿ ಬದುಕು ಇದೆ ಎಂದು ನಾನು ಹೇಳದೆಯೇ ಅವರು ಅರ್ಥ ಮಾಡಿಕೊಂಡಿದ್ದರು. ಮಾಮಿ ಮಾತ್ರ ತುಸು ಮುನಿಸಿಕೊಂಡರು.